ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

**ಸಿ.ಸಿ.:1/2021**
ಸಿ.ಡಬ್ಲ್ಯು 1 ಪಿ.ಡಬ್ಯೂ : **2**

ಸಾಕ್ಷಿದಾರರ ಹೆಸರು ಬಿ.ಕೆ. ಅರುಣ್ ಕುಮಾರ್
ತಂದೆಯ ಹೆಸರು ದಿ.ಬಿ.ಕೃಷ್ಣ
ವಯಸ್ಸು 41 ವರ್ಷ
ಉದ್ಯೋಗ ಗ್ರಾಮ ಆಡಳಿತಾಧಿಕಾರಿ
ವಾಸಸ್ಥಳ ಉಡುಪಿ.

ದಿನಾಂಕಃ **22.06.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

2015 ರಿಂದ 2020 ರವರೆಗೆ ಹೆಜಮಾಡಿ ಗ್ರಾಮದ ವಿ.ಎ.ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ಲೋಕಸಭಾ ಚುನಾವಣೆಯ ಪ್ರಯಕ್ತ ಮಾನ್ಯ ತಹಶೀಲ್ದಾರ್ ರವರ ಆದೇಶದ ಮೇರೆಗೆ ದಿನಾಂಕ 14.03.2019 ರಂದು ನಾನು ಹೆಜಮಾಡಿಯ ಚೆಕ್ ಪೋಸ್ಟ್ ನಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೆನು. ಆ ಸಮಯದಲ್ಲಿ ಚಾ.ಸಾ.2 ರಿಂದ 4 ಹಾಗೂ 7 ನೇ ಆ.5 ರೋಪಿಯವರು ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ಆ ಸಮಯದಲ್ಲಿ ನಾವು ವಾಹನಗಳನ್ನು ತಪಾಸಣೆ ಮಾಡುತ್ತಿದ್ದೆವು ಹಾಗೂ ಆ ಬಗ್ಗೆ ರಿಜಿಸ್ಟರ್ ನ್ನು ನಿರ್ವಹಿಸುತ್ತಿದ್ದೆವು. ಬೆಳಿಗ್ಗೆ 11.30 ರ ಸಮಯಕ್ಕೆ ಮಂಗಳೂರಿನ ಕಡೆಯಿಂದ ಕೆಎ-20-ಎ-6963 ಸಂಖ್ಯೆಯ ಮರಳು ತುಂಬಿದ ಟಿಪ್ಪರ್ ವಾಹನವು ಬಂದಿತ್ತು. ಅದರ ದಾಖಲೆಯನ್ನು ಕೇಳಿದಾಗ ಅವರು ಟ್ರಿಪ್ ಸೀಟ್ ನ್ನು ನೀಡಿದರು. ಆ ಟಿಪ್ ಸೀಟ್ ಕೆಎ-**29-9830** ಟಿಪ್ಪರ್ ಗೆ ಸಂಬಂಧಿಸಿದ್ದು ಆಗಿತ್ತು. ಈ ಬಗ್ಗೆ ನಾವು ಕಾಪು ತಾಲ್ಲೂಕಿನ ಮಾನ್ಯ ತಹಶೀಲ್ದಾರ್ ರವರಿಗೆ ಮಾಹಿತಿಯನ್ನು ನೀಡಿದೆವು. ಅವರು ಸ್ಥಳಕ್ಕೆ ಬರುತ್ತೇವೆಂದು ಹೇಳಿದ್ದರಿಂದ ಅಲ್ಲಿಯೇ ಕಾಯುತ್ತಿದ್ದೆವು. ಮಧ್ಯಾಹ್ನ 12.30 ರ ಸಮಯಕ್ಕೆ ಸುಮಾರು 15 ರಿಂದ 20 ಮಂದಿ ಒಂದು ಬಿಳಿ ಶಿಪ್ಟ್ , ಬಿಳಿ ಕಪ್ಪು ಬಣ್ಣದ ಕಾರು, ಆಕ್ಟಿವಾ ಹೊಂಡಾ ಹಾಗೂ ಮೋಟಾರ್ ಸೈಕಲ್ ನಲ್ಲಿ ಬಂದು ಟಿಪ್ಪರ್ ವಾಹನವನ್ನು ಬಿಡುವಂತೆ ಹೇಳಿದರು. ನಾವು ವಾಹನವನ್ನು ಬಿಡಲು ಆಗುವುದಿಲ್ಲವೆಂದು ಹೇಳಿದೆವು, ಅದಕ್ಕೆ

ಅವರು ಅವಾಚ್ಯ ಶಬ್ದಗಳಿಂದ ಬೈದರು ಮತ್ತು ವಾಹನವನ್ನು ಚಲಾಯಿಸಿಕೊಂಡು ಹೋಗುತ್ತೇವೆಂದು ಹೇಳಿದರು. ಮಾನ್ಯ ತಹಶೀಲ್ದಾರ್ ರವರು ಸ್ಥಳಕ್ಕೆ ಬಂದು 7 ನೇ ಆರೋಪಿಯವರ ಸುಪರ್ದಿಯಲ್ಲಿ ಪೋಲೀಸ್ ಠಾಣೆಗೆ ತೆಗೆದುಕೊಂಡು ಹೋಗುವಂತೆ ತಿಳಿಸಿದರು. ಅವರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದರು. 7 ನೇ ಆರೋಪಿಯವರ ಸುಪರ್ದಿಯಲ್ಲಿ ವಾಹನವನ್ನು ಪೋಲೀಸ್ ಠಾಣೆಗೆ ತೆಗೆದುಕೊಂಡು ಹೋದರು ನಂತರ ನಾನು ಹೋಗಿ ದೂರು ನೀಡಿದೆನು. ನಾನು ಹೋದ ಸಮಯದಲ್ಲಿ ಠಾಣೆಯಲ್ಲಿ ಖಾಲಿ ಟಿಪ್ಪರ್ ಇತ್ತು. ನಂತರ ಗಣಿ ಇಲಾಖೆಯವರು ಬಂದರು. ಸ್ಥಳದಿಂದ ಟಿಪ್ಪರ್ ವಾಹನವನ್ನು ಠಾಣೆಗೆ ತರುವ ಮೊದಲೇ ಆರೋಪಿತರು ಹಾಗೂ ಜೀವನ್ ಸೇರಿ ಪಡುಬಿದ್ರಿಯ ಮಸೀದಿ ಬಳಿ ಮರಳನ್ನು ಹಾಕಿರುತ್ತಾರೆನ್ನುವ ಮಾಹಿತಿಯು ತಿಳಿಯಿತು. ಈ ಬಗ್ಗೆ ನಾನು ನನ್ನ ಮೇಲಾಧಿಕಾರಿಯವರಿಗೆ ಮಾಹಿತಿಯನ್ನು ನೀಡಿ, ದೂರು ನೀಡಿದೆನು. ಸಾಕ್ಷಿಯವರು ಒಂದು ದಾಖಲೆಯನ್ನು ನೋಡಿ ಇದು ನಾನು ನೀಡಿದ ದಾಖಲೆ ಎಂದು ಗುರ್ತಿಸಿದ್ದು ಅದನ್ನು ನಿಪಿ.4 ಎಂದು, ನಿಪಿ.4 ರಲ್ಲಿರುವ ಸಹಿಯನ್ನು ನನ್ನ ಸಹಿ ಎಂದು ಸಾಕ್ಷಿಯವರು ಗುರ್ತಿಸಿದ್ದು ಅದನ್ನು ನಿಪಿ.4(ಎ) ಎಂದು ಗುರ್ತಿಸಲಾಯಿತು.

ನಂತರ ನನ್ನ ಹೇಳಿಕೆಯನ್ನು ಪಡೆದುಕೊಂಡರು. ನಂತರ ಸ್ಥಳಕ್ಕೆ ಕರೆದುಕೊಂಡು ಹೋಗಿ ಪಂಚನಾಮೆಯನ್ನು ಮಾಡಿದರು. ಪೋಲೀಸಿನವರಿಗೆ ಸ್ಥಳವನ್ನು ತೋರಿಸಿದೆನು. ಆ ಸಮಯದಲ್ಲಿ ಚಾ.ಸಾ.6 ಮತ್ತು 7 ರವರು ಇದ್ದರು. ಪಂಚನಾಮೆಯನ್ನು ದಿನಾಂಕ **15.03.2019** ರಂದು ಮಾಡಿದರು. ಸಾಕ್ಷಿಯವರು ಒಂದು ದಾಖಲೆಯನ್ನು ನೋಡಿ ಇದು ನಾನು ಸಹಿ ಮಾಡಿದ ಘಟನಾ ಸ್ಥಳದ ಪಂಚನಾಮೆ ಎಂದು ಗುರ್ತಿಸಿದ್ದು ಅದನ್ನು ನಿಪಿ.5 ಎಂದು ಗುರ್ತಿಸಲಾಯಿತು. ನಿಪಿ.5 ರಲ್ಲಿರುವ ಸಹಿಯನ್ನು ನನ್ನ ಸಹಿ ಎಂದು ಸಾಕ್ಷಿಯವರು ಗುರ್ತಿಸಿದ್ದು ಅದನ್ನು ನಿಪಿ.5(ಎ) ಎಂದು ಗುರ್ತಿಸಲಾಯಿತು.

ಅದೇ ದಿನ ಪೋಲೀಸ್ ಠಾಣೆಯ ಆವರಣದಲ್ಲಿ ಖಾಲಿ ಟಿಪ್ಪರ್ ಹಾಗೂ ಟ್ರಿಪ್ ಸೀಟ್ ನ್ನು ತೋರಿಸಿದರು. ಆ ವೇಳೆ ಚಾ.ಸಾ.6 ಮತ್ತು 7 ರವರು ಹಾಜರಿದ್ದರು. ಪೋಲೀಸಿನವರು ಟಿಪ್ಪರ್ ಹಾಗೂ ಟ್ರಿಪ್ ಸೀಟ್ ನ್ನು ಪಂಚನಾಮೆಯನ್ನು ಮಾಡಿ ವಶಕ್ಕೆ ತೆಗೆದುಕೊಂಡರು. ಸಾಕ್ಷಿಯವರು ಪಂಚನಾಮೆ ಮತ್ತು ಅವರ ಸಹಿಯನ್ನು ನೋಡಿ ಗುರ್ತಿಸಿದ್ದು, ಸ್ವತ್ತು ಸ್ವಾಧೀನ ಪಂಚನಾಮೆಯನ್ನು ನಿಪಿ.6 ಎಂದು, ನಿಪಿ.6 ರಲ್ಲಿರುವ ಸಹಿಯನ್ನು ನನ್ನ ಸಹಿ ಎಂದು ಸಾಕ್ಷಿಯವರು ಗುರ್ತಿಸಿದ್ದು ಅದನ್ನು ನಿಪಿ.6(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯವರು ಒಂದು ಭಾವಚಿತ್ರವನ್ನು ನೋಡಿ ಇದು ಟಿಪ್ಪರ್ ಗೆ ಸಂಬಂಧಿಸಿದ್ದು ಎಂದು ಗುರ್ತಿಸಿದ್ದು ಅದನ್ನು ಈಗಾಗಲೇ ನಿಪಿ.1 ಎಂದು ಗುರ್ತಿಸಲಾಗಿದೆ. ಸಾಕ್ಷಿಯವರು ಒಂದು ದಾಖಲೆಯನ್ನು ನೋಡಿ ಇದು ಟಿಪ್ಪರ್ ಚಾಲಕನು ಹೇಳಿದ ಟ್ರಿಪ್ ಸೀಟ್ ಎಂದು ಗುರ್ತಿಸಿದ್ದು, ಅದನ್ನು ಈಗಾಗಲೇ ನಿಪಿ.2 ಎಂದು ಗುರ್ತಿಸಲಾಗಿದೆ. ಪೋಲೀಸಿನವರು ನನ್ನನ್ನು ಪುನಃ ಬರುವಂತೆ ಹೇಳಿದರು. ನಾನು ಠಾಣೆಗೆ ಹೋಗಿ ಆರೋಪಿಗಳನ್ನು ಗುರ್ತಿಸಿದ ಬಗ್ಗೆ ಕೃತ್ಯಕ್ಕೆ ಉಪಯೋಗಿಸಿದ ವಾಹನಗಳ ಬಗ್ಗೆ ಹೇಳಿಕೆಯನ್ನು ನೀಡಿದೆನು. ಸಾಕ್ಷಿಯವರು ಒಂದು ಭಾವಚಿತ್ರವನ್ನು ನೋಡಿ ಆ ದಿನ ಆರೋಪಿತರು ಬಂದಿದ್ದ ಶಿಫ್ಟ್ ಕಾರು ಇದೆ ಎಂದು ಗುರ್ತಿಸಿದ್ದು, ಅದನ್ನು ನಿಪಿ.7 ಎಂದು, ಸಾಕ್ಷಿಯವರು 4 ಪೋಟೋಗಳನ್ನು ನೋಡಿ ಆರೋಪಿತರು ಬಂದಿದ್ದ ಆಕ್ಟಿವಾ ಹೊಂಡಾ ಹಾಗೂ ಬೈಕ್ ಗೆ ಸಂಬಂಧಿಸಿದ ಪೋಟೋಗಳು ಎಂದು ಗುರ್ತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.8 ರಿಂದ ನಿಪಿ.11 ಎಂದು ಗುರ್ತಿಸಲಾಯಿತು. ನಾನು 6 ಜನರನ್ನು ನೋಡಿ ಗುರ್ತಿಸಿದೆನು. ಅವರ ಹೆಸರುಗಳೆಂದರೆ ಮಹಮ್ಮದ್ ಅರೀಫ್, ಷರೀಫ್, ಅಜ್ಗರ್, ಮುಬಿನ್, ಫಾರೂಕ್ ಮತ್ತು ಮಹಮ್ಮದ್ ಆರೀಸ್. ಅವರನ್ನು ನೋಡಿದರೆ ನಾನು ಗುರ್ತಿಸಬಲ್ಲೆನು. ಸಾಕ್ಷಿಯವರು ನ್ಯಾಯಾಲಯದ ಮುಂದಿರುವ 7 ನೇ ಆರೋಪಿಯವರನ್ನು ನೋಡಿ ಇವರು ಜೀವನ್ ಆಗಿರುತ್ತಾರೆ. ಉಳಿದ ಆರೋಪಿತರು ಗೈರು ಹಾಜರಾಗಿದ್ದು, ಅವರ

ಪರ ಗೌರವಾನ್ವಿತ ವಕೀಲರುಗಳು ವಿನಾಯಿತಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ ಹಾಗೂ ಗುರ್ತಿಸುವಿಕೆಯ ಬಗ್ಗೆ ಆಕ್ಷೇಪ ಮಾಡಿರುವುದಿಲ್ಲ.

ಪಾಟೀ ಸವಾಲುಃ 3 ಮತ್ತು 6 ನೇ ಆರೋಪಿತರ ಪರವಾಗಿ ಶ್ರೀ ಎಸ್.ಎ. ವಕೀಲರವರಿಂದಃ

ನೀವು ವಾಹನಗಳನ್ನು ತಪಾಸಣೆ ಮಾಡುತ್ತಿದ್ದ ಚೆಕ್ ಪೋಸ್ಟ್ ನ ಬಳಿಯೇ ಪಡುಬಿದ್ರಿ ಪೋಲೀಸ್ ಠಾಣೆಯ ಒಂದು ಖಾಯಂ ಚೆಕ್ ಪೋಸ್ಟ್ ಇದೆ ಎಂದರೆ ಅದೇ ಚೆಕ್ ಪೋಸ್ಟ್ ನಲ್ಲಿಯೇ ನಾವು ವಾಹನಗಳನ್ನು ತಪಾಸಣೆ ಮಾಡುತ್ತಿದ್ದೆವು. ಪಡುಬಿದ್ರಿ ಪೋಲೀಸ್ ಠಾಣೆಯ ಪೋಲೀಸಿನವರು ಅವರ ಖಾಯಂ ಚೆಕ್ ಪೋಸ್ಟ್ ನಲ್ಲಿ ಇದ್ದರೆ ಎಂದರೆ ಇರಲಿಲ್ಲ. ಚೆಕ್ ಪೋಸ್ಟ್ ನ ಹತ್ತಿರದಲ್ಲಿಯೇ ಟೋಲ್ ಗೇಟ್ ಇದೆ ಎಂದರೆ ಹೌದು. ಸದ್ರಿ ಟೋಲ್ ಗೇಟ್ ನಲ್ಲಿ ಸಿಸಿ ಟಿವಿ ಇದ್ದು, ಅಲ್ಲಿ ಸಂಚರಿಸುವ ವಾಹನಗಳ ಬಗ್ಗೆ ದಾಖಲೆ ಇರುತ್ತದೆ ಎಂದರೆ ಹೌದು. ಟೋಲ್ ಗೇಟ್ ನಲ್ಲಿ ವಾಹನಗಳು ಎಷ್ಟು ಗಂಟೆಗೆ ಹೋಗಿರುತ್ತದೆ ಎನ್ನುವುದು ತಿಳಿಯುತ್ತದೆ ಎಂದೆರ ಹೌದು. ಚೆಕ್ ಪೋಸ್ಟ್ ನ ಬಳಿ 2-3 ಹೋಟೇಲ್ ಗಳು, ಗೂಡಂಗಡಿಗಳು ಇವೆ ಎಂದರೆ ಹೌದು. ಚೆಕ್ ಪೋಸ್ಟ್ ನ ಬಳಿ ನಾರಾಯಣ ಗುರು ಮಂದಿರಕ್ಕೆ ಹೋಗುವ ರಸ್ತೆ ಹಾಗೂ ಹೆಜಮಾಡಿಯ ಹಳೇ ಪೇಟೆಗೆ ಹೋಗುವ ರಸ್ತೆ ಇದೆ ಎಂದರೆ ಹಳೇ ಪೇಟೆಗೆ ಹೋಗುವ ರಸ್ತೆ ಇರುತ್ತದೆ. ತುಂಬಾ ಜನರು ಸಂಚರಿಸುವಂತಹ ಪ್ರದೇಶ ಎಂದರೆ ಹೌದು. ನೀವು ಆ ದಿನ ಎಷ್ಟು ವಾಹನಗಳನ್ನು ತಪಾಸಣೆ ಮಾಡಿರುತ್ತೀರಿ ಎನ್ನುವ ಬಗ್ಗೆ ರಿಜಿಸ್ಟರ್ ನ್ನು ನಿರ್ವಹಣೆ ಮಾಡುತ್ತೀರಿ ಎಂದರೆ ಹೌದು. ಚೆಕ್ ಪೋಸ್ಟ್ ನಲ್ಲಿ ನೀವು ಎಷ್ಟು ಮಂದಿ ಇದ್ದಿರಿ ಎಂದರೆ 4 ಮಂದಿ ಇದ್ದೆವು. ನೀವು ಚೆಕ್ ಪೋಸ್ಟ್ ಗೆ ಕರ್ತವ್ಯಕ್ಕೆ ಹಾಜರಾದ ಬಗ್ಗೆ ಯಾವ ದಾಖಲೆಗೆ ಸಹಿ ಮಾಡುತ್ತೀರಿ ಎಂದರೆ ನೋಡೆಲ್ ಆಫೀಸರ್ ರವರು ನಮ್ಮ ಸಹಿಗಳನ್ನು ಪಡೆದುಕೊಳ್ಳುತ್ತಾರೆ. ನೀವು 4 ಮಂದಿ ಒಟ್ಟಾಗಿ ವಾಹನಗಳನ್ನು ತಪಾಸಣೆ

ಮಾಡಿರುತ್ತೀರಾ ಅಥವಾ ಬೇರೆ ಬೇರೆಯಾಗಿ ವಾಹನಗಳನ್ನು ತಪಾಸಣೆ ಮಾಡಿರುತ್ತೀರಾ ಎಂದರೆ ಪೋಲೀಸಿನವರು ವಾಹನಗಳನ್ನು ನಿಲ್ಲಿಸುತ್ತಿದ್ದರು ನಾವು ತಪಾಸಣೆ ಮಾಡುತ್ತಿದ್ದೆವು. ನೀವು ತಪಾಸಣೆ ಮಾಡಿರುತ್ತೀರಿ ಎಂದು ಹೇಳುವ ಟಿಪ್ಪರ್ ವಾಹನವನ್ನು ಯಾವ ಪೋಲೀಸಿನವರು ನಿಲ್ಲಿಸಿದ್ದರು ಎಂದರೆ ಎ.ಎಸ್.ಐ.ರವರಾದ ಸುರೇಶ್ ರವರು ನಿಲ್ಲಿಸಿದ್ದರು. ಸುರೇಶ್ ರವರು ವಾಹನವನ್ನು ನಿಲ್ಲಿಸಿದ ನಂತರ ಚಾ.ಸಾ.2 ರವರು ವಾಹನವನ್ನು ತಪಾಸಣೆ ಮಾಡಿದರು. ಚಾ.ಸಾ.2 ರವರು ಟಿಪ್ಪರ್ ವಾಹನದ ಚಾಲಕರ ಡಿ.ಎಲ್., ಟಿಪ್ಪರ್ ನ ಆರ್.ಸಿ.ಯನ್ನು ನೋಡಿರುತ್ತಾರೆಯೇ ಎಂದರೆ ಇಲ್ಲ. ಚಾ.ಸಾ.2 ರವರು ಯಾವ ದಾಖಲೆಯನ್ನು ನೋಡಿರುತ್ತಾರೆ ಎಂದರೆ ಟ್ರಿಪ್ ಸೀಟ್ ನ್ನು ಚಾ.ಸಾ.2 ರವರಿಗೆ ನೀಡಿರುತ್ತಾರೆ. ಟಿಪ್ಪರ್ ವಾಹನದ ಚಾಲಕರಿಂದ ಟ್ರಿಪ್ ಸೀಟ್ ಪಡೆದ ಬಗ್ಗೆ ಚಾ.ಸಾ.2 ರವರು ಯಾವುದಾದರೂ ದಾಖಲೆಯನ್ನು ಮಾಡಿರುತ್ತಾರೆಯೇ ಎಂದರೆ ಇಲ್ಲ. ನೀವು ಹಾಗೂ ಇತರರು ಚಾ.ಸಾ.2 ರವರೊಂದಿಗೆ ಇದ್ದದ್ದು ಮಾತ್ರ ಎಂದರೆ ಹೌದು. ಎಷ್ಟು ಗಂಟೆಗಳ ಕಾಲ ಚಾ.ಸಾ.2 ರವರು ತನಿಖೆಯನ್ನು ಮಾಡಿರುತ್ತಾರೆಂದರೆ ಸುಮಾರು 15 ನಿಮಿಷಗಳ ಕಾಲ ಮಾಡಿರುತ್ತಾರೆ. ತಪಾಸಣೆ ಮಾಡಿದ ಎಷ್ಟು ಗಂಟೆಯ ನಂತರ ನೀವು ಹೇಳಿದ ವ್ಯಕ್ತಿಗಳು ಬಂದರು ಎಂದರೆ ಸುಮಾರು ಒಂದು ಗಂಟೆಯ ನಂತರ ಬಂದರು. ಕಾರಿನಲ್ಲಿ ಎಷ್ಟು ಮಂದಿ ಹಾಗೂ ಯಾರು ಯಾರು ಬಂದರು ಎಂದು ಹೇಳಬಹುದೇ ಎಂದರೆ ಅದು ತಿಳಿಯುವುದಿಲ್ಲ. ಮೋಟಾರ್ ಬೈಕ್ ನಲ್ಲಿ ಹಾಗೂ ಸ್ಕೂಟರಿನಲ್ಲಿ ಯಾರು ಯಾರು ಬಂದರು ಮತ್ತು ಎಷ್ಟು ಮಂದಿ ಬಂದರು ಎಂದು ಹೇಳು ಆಗುತ್ತದೆಯೇ ಎಂದರೆ ಇಲ್ಲ. ಅಲ್ಲಿ ಬಂದಿದ್ದರೆಂದು ಹೇಳುವಂತಹ ವ್ಯಕ್ತಿಗಳು ಎಷ್ಟು ಗಂಟೆಗಳ ಕಾಲ ಅಲ್ಲಿ ಇದ್ದರು ಎಂದರೆ ಸುಮಾರು ಅರ್ಧ ಗಂಟೆಯ ಕಾಲ ಇದ್ದರು. ಅಲ್ಲಿ ಬಂದಿದ್ದರೆಂದು ಹೇಳುವ ವ್ಯಕ್ತಿಗಳು ಯಾರೊಂದಿಗೆ ಮಾತನಾಡಿದರು ಎಂದರೆ

ಮಾತನಾಡಲಿಲ್ಲ, ಗಲಾಟೆಯನ್ನು ಮಾಡಿದರು. ಮಾನ್ಯ ತಹಶೀಲ್ದಾರ್ ರವರು ಎಷ್ಟು ಗಂಟೆಗೆ ಅಲ್ಲಿ ಸ್ಥಳಕ್ಕೆ ಬಂದರು ಎಂದರೆ 12.45 ರ ಸಮಯಕ್ಕೆ ಬಂದರು. ಮಾನ್ಯ ತಹಶೀಲ್ದಾರ್ ರವರು ಸ್ಥಳಕ್ಕೆ ಬಂದ ಸಮಯದಲ್ಲಿ ಎಷ್ಟು ಮಂದಿ ಇದ್ದರು ಎಂದರೆ ಅಲ್ಲಿ ಯಾರೂ ಇರಲಿಲ್ಲ. ಮಾನ್ಯ ತಹಶೀಲ್ದಾರ್ ರವರು ಸ್ಥಳಕ್ಕೆ ಬಂದ ನಂತರ ನೀವು ಹೇಳುವಂತಹ ಟಿಪ್ಪರ್ ವಾಹನವನ್ನು ಪರಿಶೀಲಿಸಿ ಟಿಪ್ಪರ್ ವಾಹನವನ್ನು ಹಾಗೂ ಅದರಲ್ಲಿ ಇತ್ತು ಹೇಳುವ ವಸ್ತುವನ್ನು ಪಂಚನಾಮೆಯನ್ನು ಮಾಡಿ ವಶಕ್ಕೆ ಪಡೆದುಕೊಂಡಿರುತ್ತಾರೆಯೇ ಎಂದರೆ ಇಲ್ಲ. ಆ ಸಮಯದಲ್ಲಿ ಅಲ್ಲಿ ಇದ್ದ ನಿಮ್ಮವರ ಪೈಕಿ ಯಾರಾದರೂ ಟಿಪ್ಪರ್ ವಾಹನ ಹಾಗೂ ಅದರಲ್ಲಿ ಇತ್ತು ಎಂದು ಹೇಳುವ ವಸ್ತುವಿನ ಬಗ್ಗೆ ಪೋಟೋವನ್ನು ತೆಗೆದಿರುತ್ತೀರಾ ಎಂದರೆ ಇಲ್ಲ. ತಹಶೀಲ್ದಾರ್ ರವರು ಎಷ್ಟು ಸಮಯಗಳ ಕಾಲ ಅಲ್ಲಿ ಇದ್ದರು ಎಂದರೆ ಸುಮಾರು 15 ನಿಮಿಷ ಇದ್ದರು. ಸದ್ರಿ ಟಿಪ್ಪರ್ ವಾಹನದಲ್ಲಿ ಎಷ್ಟು ಮಂದಿ ಇದ್ದರು ಎಂದರೆ ಚಾಲಕರು ಮಾತ್ರ ಇದ್ದರು. ತಹಶೀಲ್ದಾರ್ ರವರು ಠಾಣೆಗೆ ಕಳುಹಿಸಿರುವುದೇ ಅಥವಾ ನಿಮ್ಮಲ್ಲಿ ಯಾರಾದರೂ ಠಾಣೆಗೆ ಕಳುಹಿಸಿದರೆ ಎಂದರೆ ಮಾನ್ಯ ತಹಶೀಲ್ದಾರ್ ರವರು ಕಳುಹಿಸಿದರು. ಯಾರ ಜೊತೆಯಲ್ಲಿ ಟಿಪ್ಪರ್ ವಾಹನವನ್ನು ಠಾಣೆಗೆ ಕಳುಹಿಸುತ್ತಿದ್ದೇವೆಂದು ಮಾನ್ಯ ತಹಶೀಲ್ದಾರ್ ರವರಾಗಲೀ ಅಥವಾ ನಿಮ್ಮ ತಂಡದಲ್ಲಿ ಇದ್ದವರಾಗಲೀ ಲಿಖಿತ ಆದೇಶವನ್ನು ಮಾಡಿ ಕಳುಹಿಸಿರುತ್ತೀರಾ ಎಂದರೆ ಇಲ್ಲ. ಟಿಪ್ಪರ್ ವಾಹನವನ್ನು ತಪಾಸಣೆ ಮಾಡುವ ಸಮಯದಲ್ಲಿ ಅಲ್ಲಿ ಆಸು ಪಾಸಿನಲ್ಲಿದ್ದವರನ್ನು ಕರೆಸಿರುತ್ತೀರಾ ಎಂದರೆ ಇಲ್ಲ. ಠಾಣೆಗೆ ಯಾರು ಹೋಗಿರುತ್ತೀರಿ ಮತ್ತು ಎಷ್ಟು ಗಂಟೆಗೆ ಹೋಗಿರುತ್ತೀರಿ ಎಂದರೆ ನಾನೊಬ್ಬನೇ ಸಂಜೆ 4.00 ಗಂಟೆ ಸಮಯಕ್ಕೆ ಹೋದೆನು. ಮಾನ್ಯ ತಹಶೀಲ್ದಾರ್ ರವರು ಠಾಣೆಗೆ ಬಂದಿದ್ದರೆ ಎಂದರೆ ಇಲ್ಲ. ಠಾಣೆಯಲ್ಲಿ 4.00 ಗಂಟೆಯಿಂದ ಎಷ್ಟು ಗಂಟೆಯವರೆಗೆ ಇದ್ದಿರಿ ಎಂದರೆ ರಾತ್ರಿ 12.00 ಗಂಟೆಯವರೆಗೂ ಇದ್ದೆನು. ನೀವು ಠಾಣೆಗೆ ಹೋದ ಸಮಯದಲ್ಲಿ ನಿಮ್ಮ ತಂಡದ ಯಾರಾದರೂ ಹಾಜರಿದ್ದರೆ ಎಂದರೆ ಇಲ್ಲ. ಚೆಕ್ ಪೋಸ್ಟ್ ನಲ್ಲಿ ನಿಮ್ಮ

ತಂಡದ ಕೆಲಸದ ಅವಧಿಯು ಆ ದಿನ ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಇತ್ತು ಎಂದರೆ ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಇತ್ತು. ಆ ದಿನ ನಿಮ್ಮ ತಂಡದವರು ಕೆಲಸದ ಅವಧಿಯನ್ನು ಪೂರ್ಣಗೊಳಿಸಿರುತ್ತೀರಾ ಎಂದರೆ ಹೌದು. ದೂರನ್ನು ಯಾರು ಟೈಪು ಮಾಡಿದ್ದು ಎಂದರೆ ಕೈಯಲ್ಲಿ ಬರೆದುಕೊಟ್ಟೆನು. ದೂರನ್ನು ಎಷ್ಟು ಗಂಟೆಗೆ ಬರೆದುಕೊಟ್ಟಿರುತ್ತೀರಿ ಎಂದರೆ ಸಂಜೆ 4.00 ಗಂಟೆಗೆ ಕೊಟ್ಟೆನು. ನೀವು ಸಂಜೆ 4.00 ಗಂಟೆಗೆ ಠಾಣೆಗೆ ಹೋಗಿ ದೂರು ನೀಡಿದ ನಂತರ ಎಲ್ಲಿಯಾದರೂ ಹೋಗಿರುತ್ತೀರಾ ಎಂದರೆ ಎಲ್ಲಿಯೂ ಹೋಗಿರುವುದಿಲ್ಲ ಠಾಣೆಯಲ್ಲಿಯೇ ಇದ್ದೆನು. ಮರಳನ್ನು ಮಸೀದಿಯ ಬಳಿ ಹಾಕಿರುತ್ತಾರೆಂದು ನಿಮಗೆ ಎಷ್ಟು ಗಂಟೆಗೆ ತಿಳಿಯಿತು ಎಂದರೆ ನಾನು ದೂರು ನೀಡುವ ಕಾಲಕ್ಕೆ ತಿಳಿದಿತ್ತು. ಮರಳನ್ನು ಮಸೀದಿಯ ಬಳಿ ಹಾಕಿರುತ್ತಾರೆಯೇ ಅಥವಾ ಇಲ್ಲವೇ ಎಂದು ನೀವು ಸ್ವತಃ ಪರಿಶೀಲನೆ ಮಾಡಿರುತ್ತೀರಾ ಎಂದರೆ ಇಲ್ಲ. ಆ ನಂತರ ನೀವು ಯಾವುದೇ ದಿನದಂದು ಮತ್ತು ಯಾವುದೇ ಸ್ಥಳದಲ್ಲಿ ಮರಳನ್ನು ನೋಡಿರುತ್ತೀರಾ ಎಂದರೆ ಇಲ್ಲ. ನೀವು ಮರುದಿನ ಕರ್ತವ್ಯ ಹೋಗಿರುತ್ತೀರಾ ಎಂದರೆ ಇಲ್ಲ ನಾನು ಠಾಣೆಯಲ್ಲಿಯೇ ಇದ್ದೆನು. ಮರುದಿನ ನೀವು ಎಷ್ಟು ಗಂಟೆಗೆ ಠಾಣೆಗೆ ಹೋಗಿರುತ್ತೀರಿ, ಎಷ್ಟು ಗಂಟೆಯವರೆಗೆ ಅಲ್ಲಿಯೇ ಇರುತ್ತೀರಿ ಎಂದರೆ ಬೆಳಿಗ್ಗೆ 10.00 ಗಂಟೆಗೆ ಠಾಣೆಗೆ ಹೋದೆನು. 10.30 ರ ಸಮಯಕ್ಕೆ ಘಟನೆಯ ಸ್ಥಳಕ್ಕೆ ಹೋದೆವು. ಪಂಚನಾಮೆಯನ್ನು ತಯಾರಿಸುವ ಕಾಲಕ್ಕೆ ನಿಮ್ಮ ತಂಡವು ಅಲ್ಲಿ ಇತ್ತೇ ಎಂದರೆ ನೆನಪಿಲ್ಲ. ಮರುದಿನ ನೀವು ಘಟನೆಯಾಗಿದೆ ಎಂದು ಹೇಳುವ ಸ್ಥಳಕ್ಕೆ ನೋಡಲ್ ಅಧಿಕಾರಿಯಾಗಿ ಯಾರಾದರೂ ಇದ್ದರೇ ಎಂದರೆ ನೆನಪಿಲ್ಲ. ಪಂಚನಾಮೆಯನ್ನು ತಯಾರಿಸಿದ ದಿನದಂದು ನಿಮ್ಮ ಇಲಾಖೆಯವರು ಚೆಕ್ ಪೋಸ್ಟ್ ನಲ್ಲಿ ಇದ್ದರೆ ಎಂದರೆ ಇದ್ದರು. ಪಂಚನಾಮೆಯನ್ನು ತಯಾರಿಸುವ ಕಾಲಕ್ಕೆ ಆ ದಿನ ಚೆಕ್ ಪೋಸ್ಟ್ ನಲ್ಲಿ ತಪಾಸಣೆ ಕಾರ್ಯವನ್ನು ಮಾಡುತ್ತಿದ್ದ ತಂಡದವರನ್ನು ಕರೆದಿರುತ್ತಾರೆಯೇ

ಎಂದರೆ ಗೊತ್ತಿಲ್ಲ. ಆ ದಿನ ನೀವು ಠಾಣೆಗೆ ಹೋಗಿರುತ್ತೀರಾ ಎಂದರೆ ಸಂಜೆ ಹೋಗಿದ್ದೆನು. ನೀವು ಸಂಜೆ ಠಾಣೆಗೆ ಹೋದಾಗ ಎಷ್ಟು ದಾಖಲೆಗಳಿಗೆ ಸಹಿ ಮಾಡಿರುತ್ತೀರಿ ಎಂದರೆ 2 ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ಘಟನೆಯಾಗಿದೆ ಎಂದು ಹೇಳುವ ಸ್ಥಳದಲ್ಲಿ ಪಂಚನಾಮೆಯನ್ನು ಮಾಡುವಾಗ ಎಷ್ಟು ಮಂದಿ ಇದ್ದರು ಎಂದರೆ ಇಬ್ಬರು ಸಾಕ್ಷಿಗಳು ಮತ್ತು ತಪಾಸಣೆ ಮಾಡುತ್ತಿದ್ದ ಸಿಬ್ಬಂದಿಯವರು ಮಾತ್ರ ಇದ್ದರು. ಆ ಸಮಯದಲ್ಲಿ ನೀವು ಎಷ್ಟು ಗಂಟೆಗಳ ಕಾಲ ಸ್ಥಳದಲ್ಲಿ ಇದ್ದಿರಿ ಎಂದರೆ ಸುಮಾರು ಅರ್ಧ ಗಂಟೆಗಳ ಕಾಲ ಇದ್ದೆನು. ಪಂಚನಾಮೆಯನ್ನು ಎಲ್ಲಿ ಬರೆದರು ಎಂದರೆ ಅಲ್ಲಿಯೇ ಕಟ್ಟಡದಲ್ಲಿ ಬರೆದರು. ಸ್ಥಳ ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಭಾವಚಿತ್ರವನ್ನು ತೆಗೆಸಿರುತ್ತಾರಾ ಎಂದರೆ ಇಲ್ಲ. ನಿತಿನ್ ಮತ್ತು ಸಂತೋಷ್ ರವರನ್ನು ಯಾರು ಕೆಲಸಕ್ಕೆ ಕರೆದುಕೊಂಡು ಬಂದರು ಎಂದರೆ ಸ್ಥಳದಲ್ಲಿಯೇ ಇದ್ದರು, ಪೋಲೀಸಿನವರು ಕರೆದುಕೊಂಡು ಬಂದರು. ನಿತಿನ್ ಮತ್ತು ಸಂತೋಷ್ ರವರ ಪರಿಚಯ ನಿಮಗೆ ಇತ್ತೇ ಎಂದರೆ ಇಲ್ಲ. ಸ್ಥಳ ಪಂಚನಾಮೆಗೆ ಠಾಣೆಯಲ್ಲಿ ಸಹಿ ಹಾಕಿರುತ್ತೀರಿ ಎಂದರೆ ಸರಿಯಲ್ಲ. ಟಿಪ್ಪರ್ ಹಾಗೂ ಟ್ರಿಪ್ ಸೀಟ್ ನ ಬಗ್ಗೆ ಎಷ್ಟು ಗಂಟೆಗೆ ಪಂಚನಾಮೆಯನ್ನು ತಯಾರಿಸಿದರು ಎಂದರೆ ಸಂಜೆ 5.30 ರ ಸಮಯಕ್ಕೆ ತಯಾರಿಸಿದರು. ಟ್ರಿಪ್ ಸೀಟ್ ನ್ನು ಚಾ.ಸಾ.2 ರವರು ಪೋಲೀಸಿನವರಿಗೆ ನೀಡಿರುತ್ತಾರೆಯೇ ಎಂದರೆ ಮಾನ್ಯ ತಹಶೀಲ್ದಾರ್ ರವರಿಗೆ ಮಾಹಿತಿಯನ್ನು ನೀಡಿದ ಸಮಯದಲ್ಲಿ ಚಾ.ಸಾ.2 ರವರು ನನಗೆ ಟ್ರಿಪ್ ಸೀಟ್ ನ್ನು ನೀಡಿದರು ನಾನು ಪೋಲೀಸಿನವರಿಗೆ ನೀಡಿದೆನು. ಚಾ.ಸಾ.2 ರವರು ಟ್ರಿಪ್ ಸೀಟ್ ನ್ನು ನಿಮ್ಮ ಸ್ವಾಧೀನಕ್ಕೆ ನೀಡಿದ ಬಗ್ಗೆ ಯಾವುದಾದರೂ ದಾಖಲೆಯನ್ನು ತಯಾರಿಸಲಾಗಿದೆಯೇ ಎಂದರೆ ಇಲ್ಲ. ಚಾ.ಸಾ.2 ರವರು ಟ್ರಿಪ್ ಸೀಟ್ ನ್ನು ನಿಮಗೆ ನೀಡುವಾಗ ಯಾರು ಇದ್ದರು ಎಂದರೆ ನಾನೊಬ್ಬನೇ ಇದ್ದೆನು. ಟ್ರಿಪ್ ಸೀಟ್ ನ್ನು ನಿಮಗೆ ನೀಡಿದಾಗ ಎಷ್ಟು ಗಂಟೆಯಾಗಿತ್ತು ಎಂದರೆ ಮಧ್ಯಾಹ್ನ 12.30 ರ ಸಮಯದಲ್ಲಿಯೇ ನೀಡಿದ್ದರು.

ಟ್ರಿಪ್ ಸೀಟ್ ಹಾಗೂ ಟಿಪ್ಪರ್ ನ್ನು ಪೋಲೀಸಿನವರು ವಶಪಡಿಸಿಕೊಳ್ಳುವಾಗ ನೀವು ಒಬ್ಬರೇ ಇದ್ದಿರಾ ಅಥವಾ ಬೇರೆಯವರು ಇದ್ದರೆ ಎಂದರೆ ನಾನೊಬ್ಬನೇ ಇದ್ದೆನು ಮತ್ತು ಆರೋಪಿತರು ಇದ್ದರು. ನೀವು ಸಂಜೆ ಠಾಣೆಗೆ ಹೋದಾಗ ಎಷ್ಟು ಗಂಟೆಗೆ ಇದ್ದಿರಿ ಎಂದರೆ 6.00 ಗಂಟೆಗೆ ಇದ್ದೆನು. ನೀವು ಠಾಣೆಗೆ ಹೋಗಿರುವುದಿಲ್ಲ, ಟ್ರಿಪ್ ಸೀಟ್ ನ್ನು ನೀಡಿರುವುದಿಲ್ಲ, ನಿಮ್ಮ ಹಾಜರಿಯಲ್ಲಿ ಟಿಪ್ಪರ್ ಹಾಗೂ ಟ್ರಿಪ್ ಸೀಟ್ ನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಎದುರಿನಲ್ಲಿ ಯಾವುದೇ ವಾಹನಗಳನ್ನು ಪೋಲೀಸಿನವರು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದರೆ ಆರೋಪಿತರು ತಂದಿದ್ದ ವಾಹನಗಳನ್ನು ಅದೇ ದಿನ ಸ್ವಾಧೀನಪಡಿಸಿಕೊಂಡರು. ಅದು ಯಾವ ದಿನ ಮತ್ತು ಎಷ್ಟು ಗಂಟೆಗೆ ಎಂದರೆ ಅದೇ ದಿನ ಸಂಜೆಯ ಸಮಯದಲ್ಲಿ ವಶಪಡಿಸಿಕೊಂಡರು. ಈ ಪ್ರಕರಣದಲ್ಲಿ ಕಾಣಿಸಿರುವ ಎಲ್ಲಾ ವಾಹನಗಳನ್ನು ವಶಪಡಿಸಿಕೊಂಡಿರುತ್ತಾರೆಯೇ ಎಂದರೆ ಹೌದು. ಆರೋಪಿತರು ತಂದಿದ್ದ ವಾಹನಗಳನ್ನು ವಶಪಡಿಸಿಕೊಂಡರು ಎಂದು ಹೇಳುವುದು ಟಿಪ್ಪರ್ ಹಾಗೂ ಟ್ರಿಪ್ ಸೀಟ್ ನ್ನು ವಶಪಡಿಸಿಕೊಳ್ಳುವುದಕ್ಕೆ ಮೊದಲೇ ಅಥವಾ ನಂತರವೇ ಎಂದರೆ ಟಿಪ್ಪರ್ ಹಾಗೂ ಟ್ರಿಪ್ ಸೀಟ್ ನ್ನು ಮೊದಲು ವಶಪಡಿಸಿಕೊಂಡರು ನಂತರ ವಾಹನಗಳನ್ನು ವಶಪಡಿಸಿಕೊಂಡರು. ಟಿಪ್ಪರ್ ಹಾಗೂ ಇತರ ವಾಹನಗಳನ್ನು ವಶಪಡಿಸಿಕೊಳ್ಳುವಾಗ ನೀವು ಒಬ್ಬರೆ ಇದ್ದಿರಾ ಎಂದರೆ ಹೌದು. ಆ ನಂತರ ನೀವು ಠಾಣೆಗೆ ಹೋಗಿರುವುದಿಲ್ಲ ಎಂದರೆ ದಿನಾಂಕ 13.04.2019 ಕ್ಕೆ ಮರು ಹೇಳಿಕೆಯನ್ನು ನೀಡು ಹೋಗಿದ್ದೆನು. ಆ ನಂತರ ನೀವು ಠಾಣೆಗೆ ಹೋಗಿರುತ್ತೀರಾ ಎಂದರೆ ಇಲ್ಲ. ನೀವು 4.00 ಗಂಟೆ ಸಮಯಕ್ಕೆ ಠಾಣೆಗೆ ಹೋದಾಗ ಆರೋಪಿತರ ಹೆಸರು ನಿಮಗೆ ತಿಳಿದಿತ್ತೇ ಎಂದರೆ ಹೌದು. ಆರೋಪಿತರ ಹೆಸರನ್ನು ನಿಮ್ಮ ದೂರಿನಲ್ಲಿ ಕಾಣಿಸಿರುತ್ತೀರಾ ಎಂದರೆ ಕಾಣಿಸಿರುತ್ತೇನೆ. ನೀವು ಮತ್ತು ಪೋಲೀಸಿನವರು ಸೇರಿಕೊಂಡು ಆರೋಪಿತರನ್ನು ಈ ಪ್ರಕರಣದಲ್ಲಿ ಸುಳ್ಳಾಗಿ ಸೇರಿಸಿರುತ್ತೀರಿ ಎಂದರೆ ಸರಿಯಲ್ಲ.

ಆರೋಪಿತರು ಯಾವ ಯಾವ ವಾಹನಗಳಲ್ಲಿ ಬಂದಿರುತ್ತಾರೆ ಹಾಗೂ ಅವುಗಳ ನೊಂದಣಿ ಸಂಖ್ಯೆ ಏನು ಎನ್ನುವುದು ನಿಮಗೆ ಆ ಸಮಯದಲ್ಲಿ ಗೊತ್ತಿತ್ತೇ ಎಂದರೆ ಹೌದು. ಈ ವಿಚಾರವನ್ನು ನೀವು ದೂರಿನಲ್ಲಿ ಬರೆದಿರುತ್ತೀರಾ ಎಂದರೆ ಹೌದು. ಆರೋಪಿತರಿಗೆ ತೊಂದರೆ ನೀಡುವ ಉದ್ದೇಶದಿಂದ ನೀವು ಮತ್ತು ಪೋಲೀಸಿನವರು ಸೇರಿ ವಾಹನಗಳನ್ನು ಈ ಪ್ರಕರಣದಲ್ಲಿ ಸಿಲುಕಿಸಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಕಾರಿಯವರಿಗೆ ಲಿಖಿತ ರೂಪದಲ್ಲಿ ದೂರನ್ನು ನೀಡಿರುತ್ತೀರಾ ಎಂದರೆ ಇಲ್ಲ. ಘಟನೆಯಾಗಿದೆ ಎಂದು ಹೇಳುವ ಕಾಲದಲ್ಲಿ ಚುನಾವಣಾ ಪ್ರಚಾರಗಳು ಆಗುತ್ತಿತ್ತು ಎಂದರೆ ಹೌದು. ಆರೋಪಿತರು ಕಾಂಗ್ರೆಸ್ ನ ಪಕ್ಷದವರಾಗಿದ್ದು, ಅಲ್ಲಿ ಕಾಂಗ್ರೆಸ್ ನ ಪರವಾಗಿ ಪ್ರಚಾರವನ್ನು ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನೀವು ಕೆಲಸ ಮಾಡುತ್ತಿದ್ದ ಕ್ಷೇತ್ರದ ಎಂಪಿ ಮತ್ತು ಎಂ.ಎಲ್.ಎ.ಗಳು ಬಿಜೆಪಿಯವರು ಆಗಿದ್ದರು ಎಂದರೆ ಹೌದು. ಕ್ಷೇತ್ರದ ಎಂಪಿ ಮತ್ತು ಎಂ.ಎಲ್.ಎ.ಗಳು ನೀಡುವ ಆದೇಶಗಳನ್ನು ನೀವು ಪಾಲನೆ ಮಾಡುತ್ತಿದ್ದಿರಿ ಎಂದರೆ ಹೌದು. ನಿಮ್ಮ ಕ್ಷೇತ್ರದ ಎಂಪಿ ಮತ್ತು ಎಂ.ಎಲ್.ಎ.ಗಳು ನಿಮಗೆ ಹಾಗೂ ಪೋಲೀಸ್ ಇಲಾಖೆಯ ಮೇಲೆ ಒತ್ತಡವನ್ನು ತಂದು ಆರೋಪಿತರ ವಿರುದ್ಧ ಸುಳ್ಳು ಕೇಸ್ ನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ. 7 ನೇ ಆರೋಪಿಯವರು ನೀವು ಹೇಳಿದ ದಿನದಂದು ನಿಮ್ಮ ತಂಡದೊಂದಿಗೆ ಕೆಲಸವನ್ನೇ ಮಾಡಿರುವುದಿಲ್ಲ ಎಂದರೆ ಮಾಡಿರುತ್ತಾರೆ. ನೀವು ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿ, ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳುವಂತಹ ಘಟನೆಯೇ ನಡೆದಿರುವುದಿಲ್ಲ, ಆರೋಪಿತರನ್ನು ನೀವು ರಾಜಕೀಯ ಒತ್ತಡದಿಂದ ಈ ಪ್ರಕರಣದಲ್ಲಿ ಸುಳ್ಳಾಗಿ ಸಿಲುಕಿಸಿರುತ್ತೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1,2,4 ಮತ್ತು 5 ನೇ ಆರೋಪಿತರ ಪರವಾಗಿ ಶ್ರೀ ಹೆಚ್.ಹೆಚ್.ಕೆ. ವಕೀಲರವರಿಂದಃ

3 ಮತ್ತು 6 ನೇ ಆರೋಪಿತರ ಪರ ಗೌರವಾನ್ವಿತ ವಕೀಲರು ಮಾಡಿರುವ ಪಾಟೀ ಸವಾಲನ್ನು ಈ ಆರೋಪಿತರ ಪರವಾಗಿ ಅಳವಡಿಸಿಕೊಳ್ಳಲು ಮನವಿ ಮಾಡಿದ್ದು, ಅವರ ಮನವಿಯನ್ನು ಅಂಗೀಕರಿಸಿ ಅಳವಡಿಸಿಕೊಳ್ಳಲಾಯಿತು.

ಪಾಟೀ ಸವಾಲುಃ 7 ನೇ ಆರೋಪಿತರ ಪರವಾಗಿ ಶ್ರೀ ಜಿ.ಜಿ.ಎಸ್. ವಕೀಲರವರಿಂದಃ

7 ನೇ ಆರೋಪಿತರ ಪರ ಗೌರವಾನ್ವಿತ ವಕೀಲರು ಮಾಡಿರುವ ಪಾಟೀ ಸವಾಲನ್ನು ಈ ಆರೋಪಿತರ ಪರವಾಗಿ ಅಳವಡಿಸಿಕೊಳ್ಳಲು ಮನವಿ ಮಾಡಿದ್ದು, ಅವರ ಮನವಿಯನ್ನು ಅಂಗೀಕರಿಸಿ ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.